# ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಸಮಷ್ಟಿ ಸಾಧನೆ ಮತ್ತು ಆಧ್ಯಾತ್ಮಿಕ ಅಧಿಕಾರ

## ಗ್ರಂಥದ ಅನುಕ್ರಮಣಿಕೆ

(ಅಧ್ಯಾಯದಲ್ಲಿನ ಕೆಲವು ವೈಶಿಷ್ಟ್ಯಪೂರ್ಣ ಅಂಶಗಳನ್ನು ಕೆಳಗೆ ಕೊಡಲಾಗಿದೆ.)


**ಅಧ್ಯಾಯ ೧. ಪರಾತ್ಪರ ಗುರು ಡಾ. ಆಠವಲೆಯವರ ವ್ಯಷ್ಟಿ ಮತ್ತು ಸಮಷ್ಟಿ ಸಾಧನೆ ೧೧**

೧ ಉ. ಪರಾತ್ಪರ ಗುರು ಡಾ. ಆಠವಲೆಯವರಿಗೆ ತಮ್ಮ ಸಾಧನೆಯ ಸಂದರ್ಭದಲ್ಲಿ ಧ್ಯಾನದಲ್ಲಿ ದೊರಕಿದ ಉತ್ತರಗಳು ೨೪

೧ ಎ. ಪರಾತ್ಪರ ಗುರು ಡಾಕ್ಟರರು ತೆಗೆದ ತಮ್ಮ ಆಧ್ಯಾತ್ಮಿಕ ಮಟ್ಟ ೫೨

೧ ಐ. ‘ಪರಾತ್ಪರ ಗುರು ಡಾ. ಆಠವಲೆಯವರ ಮಾಧ್ಯಮದಿಂದ ಈಶ್ವರೀ ಸಂಕಲ್ಪ ಹೇಗೆ ಕಾರ್ಯ ಮಾಡುತ್ತದೆ ?’ ಎಂಬುದನ್ನು ತೋರಿಸುವ ಸೂಕ್ಷ್ಮಜ್ಞಾನದ ಚಿತ್ರ ೫೫

**ಅಧ್ಯಾಯ ೨. ಡಾ. ಆಠವಲೆಯವರ ಆಧ್ಯಾತ್ಮಿಕ ಉನ್ನತಿ ೫೯**

೨ ಅ. ಗುರುಪ್ರಾಪ್ತಿಯ ನಂತರ ಕೇವಲ ೬ ತಿಂಗಳುಗಳಲ್ಲಿ ಡಾ. ಆಠವಲೆಯವರ ನಾಮಜಪ ಅಖಂಡವಾಗಿ ಆಗುವುದು ೫೯

೨ ಇ. ಡಾ. ಆಠವಲೆಯವರು ಕಾಲದ ಬಂಧನದ ಆಚೆಗೆ ಹೋಗುವುದು ೫೯

೨ ಉ. ಪ.ಪೂ. ಭಕ್ತರಾಜ ಮಹಾರಾಜರು ಡಾ. ಆಠವಲೆಯವರನ್ನು ಸಗುಣದಿಂದ ನಿರ್ಗುಣದೆಡೆಗೆ ಒಯ್ಯುವುದು ೬೦

೨ ಒ. ಡಾ. ಆಠವಲೆಯವರ ಆಧ್ಯಾತ್ಮಿಕ ಉನ್ನತಿಯ ಬಗ್ಗೆ ಇತರರಿಗೆ ಅರಿವಾದ ಅಂಶಗಳು ೬೨

೨ ಓ. ಡಾ. ಆಠವಲೆಯವರ ಆಧ್ಯಾತ್ಮಿಕ ಅವಸ್ಥೆಗಳ ಬಗ್ಗೆ ಸನಾತನದ ಜ್ಞಾನಪಡೆಯುವ ಸಾಧಕರಿಗೆ ದೊರಕಿದ ಜ್ಞಾನ ! ೬೩

**ಅಧ್ಯಾಯ ೩. ಗುರುಗಳು ಡಾ. ಆಠವಲೆಯವರ ಆಧ್ಯಾತ್ಮಿಕ ಅಧಿಕಾರದ ಬಗ್ಗೆ ತೆಗೆದ ಉದ್ಗಾರಗಳು ! ೬೯**

೩ ಆ. ಪ.ಪೂ. ಭಕ್ತರಾಜ ಮಹಾರಾಜರು ಡಾ. ಆಠವಲೆಯವರ ಆಧ್ಯಾತ್ಮಿಕ ಅಧಿಕಾರದ ಬಗ್ಗೆ ಭಕ್ತರಿಗೆ ನೀಡಿದ ಅನುಭೂತಿ ೭೪

೩ ಇ. ಡಾ. ಆಠವಲೆಯವರು ತಯಾರಿಸಿದ ಸಾಧಕರ ಬಗ್ಗೆ ಪ.ಪೂ. ಭಕ್ತರಾಜ ಮಹಾರಾಜರು ತೆಗೆದ ಗೌರವೋದ್ಗಾರ ! ೭೫

**ಅಧ್ಯಾಯ ೪. ಗುರುಗಳು ಡಾ. ಆಠವಲೆಯವರಿಗೆ ನೀಡಿದ ಆಶೀರ್ವಾದ ! ೭೬**

೪ ಅ. ೧೯೮೮ ಮತ್ತು ೧೯೯೩ – 'ಜನರು ಇವನನ್ನು ಡಾ. ಆಠವಲೆಯವರನ್ನು) ಪೂಜಿಸುವರು !' ೭೬

೪ ಆ. ೧೯೯೦ – 'ತೂ ಕಿತಾಬೋಂಕೆ ಊಪರ್ ಕಿತಾಬೆ ಲಿಖೇಗಾ ।' ೭೯

೪ ಇ. ೧೯೯೨ ರಿಂದ ೧೯೯೫ – 'ಅಧ್ಯಾತ್ಮಪ್ರಸಾರ ಮಾಡಿ !' ೭೯

೪ ಈ. ೧೯೯೩ – 'ಡಾಕ್ಟರ್, ನೀವು ನಮಗೆ (ಪ.ಪೂ. ಬಾಬಾರವರಿಗೆ) ತನು–ಮನ–ಧನವನ್ನು ಕೊಟ್ಟಿರಿ. ನಾವು ನಿಮಗೆ ಜ್ಞಾನ, ಭಕ್ತಿ ಮತ್ತು ವೈರಾಗ್ಯವನ್ನು ಕೊಟ್ಟೆವು !' ೮೧

೪ ಉ. ೧೯೯೪ – 'ಮುಂದೆ ನಿಮಗೆ (ಡಾ. ಆಠವಲೆಯವರ) ಸಾವಿರಾರು ಶಿಷ್ಯರಾಗುವರು !' ೮೨

**ಅಧ್ಯಾಯ ೫. ಡಾ. ಆಠವಲೆಯವರ ಬಗ್ಗೆ ಸಂತರು, ಮಹರ್ಷಿಗಳು (ಜೀವನಾಡಿಪಟ್ಟಿ) ಮತ್ತು ದೇವತೆಗಳು ತೆಗೆದ ಗೌರವೋದ್ಗಾರ ! ೮೫**

೫ ಇ. ಶ್ರೀ ದೇವ ಹಾಲಸಿದ್ಧನಾಥರವರು ಭವಿಷ್ಯಕಥನದ ಮೂಲಕ ಪರಾತ್ಪರ ಗುರು ಡಾ. ಆಠವಲೆಯವರ ಬಗ್ಗೆ ತೆಗೆದ ಉದ್ಗಾರ ! ೯೪

**ಅಧ್ಯಾಯ ೬. ಡಾ. ಆಠವಲೆಯವರಿಗೆ ಬಂದ ವೈಶಿಷ್ಟ್ಯಪೂರ್ಣ ಅನುಭೂತಿಗಳು ೯೬**

೬ ಆ. ಗುರುಗಳು ಶಕ್ತಿ ಕೊಟ್ಟ ನಂತರ ಡಾ. ಆಠವಲೆಯವರು ಅನುಭವಿಸಿದ ಆಧ್ಯಾತ್ಮಿಕ ಅವಸ್ಥೆ ೯೬

೬ ಐ. ೨೦೨೧ ರಿಂದ ಡಾ. ಆಠವಲೆಯವರಿಗೆ ಬ್ರಹ್ಮಾನಂದದ ಅನುಭೂತಿ ಬರುವುದು ೧೦೦

**卐 ಸಂಕಲನಕಾರರ ವೈಜ್ಞಾನಿಕ ದೃಷ್ಟಿಕೋನ ಮತ್ತು ಇತರ ಮಾಹಿತಿ ೧೦೩**

## ಗ್ರಂಥದ ಮನೋಗತ

‘ಆಪಣಾಸಾರಿಖೇ ಕರಿತಿ ತಾತ್ಕಾಳ । ನಾಹೀ ಕಾಳ ವೇಳ ಮಗ ತ್ಯಾಸೀ ॥’ (ಅರ್ಥ : ತಮ್ಮಂತೆ ಮಾಡುವರು ಕೂಡಲೇ । ಅದಕ್ಕಿಲ್ಲ ಕಾಲ ಸಮಯದ ಪರಿಮಿತಿ ॥) ಹೀಗೆ ಶ್ರೀಗುರುಗಳ ಮಹಿಮೆಯನ್ನು ವರ್ಣಿಸಲಾಗಿದೆ. ಪ.ಪೂ. ಭಕ್ತರಾಜ ಮಹಾರಾಜರು ಡಾ. ಜಯಂತ ಆಠವಲೆಯವರನ್ನು ‘ಶಿಷ್ಯ’ರೆಂದು ಸ್ವೀಕರಿಸಿದ ನಂತರ ಕಡಿಮೆ ಕಾಲಾವಧಿಯಲ್ಲಿಯೇ ಅವರನ್ನು ‘ತಮ್ಮವರಂತೆ’ ಮಾಡಿದರು ! ಕೇವಲ ೩ ವರ್ಷಗಳಲ್ಲಿಯೇ ಗುರುಗಳು ಎಲ್ಲರೆದುರು ಡಾ. ಆಠವಲೆಯವರ ಆಧ್ಯಾತ್ಮಿಕ ಅಧಿಕಾರವನ್ನು ಪ್ರಶಂಸಿಸಲಾರಂಭಿಸಿದರು. ಈ ಅಧಿಕಾರ, ಹಾಗೆಯೇ ಗುರುಗಳು ಮತ್ತು ಕೆಲವು ಸಂತರು ಡಾ. ಆಠವಲೆಯವರ ಬಗ್ಗೆ ತೆಗೆದ ಗೌರವೋದ್ಗಾರಗಳನ್ನು ಪ್ರಸ್ತುತ ಗ್ರಂಥದಲ್ಲಿ ನೀಡಲಾಗಿದೆ. ಕೆಲವು ಇತರ ಪಂಥದ ಸಂತರೂ ಡಾ. ಆಠವಲೆಯವರ ಆಧ್ಯಾತ್ಮಿಕ ಸಾಮರ್ಥ್ಯವನ್ನು ಗುರುತಿಸಿ ಮುಕ್ತಕಂಠದಿಂದ ಅವರ ಪ್ರಶಂಸೆ ಮಾಡಿರುವುದೂ ವಿಶೇಷವಾಗಿದೆ ! ಇದರಿಂದ ಡಾ. ಆಠವಲೆಯವರ ಅಸಾಮಾನ್ಯ ಆಧ್ಯಾತ್ಮಿಕ ವಿಭೂತಿಮತ್ವದ ಪರಿಚಯವಾಗುತ್ತದೆ.

ಸದ್ಯ ಸಾಧಕರು ಆಪತ್ಕಾಲದ ತಾಪವನ್ನು ಸಹಿಸುತ್ತಾ ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಮೇಲೆ ಶ್ರದ್ಧೆಯನ್ನಿಟ್ಟು ಹಿಂದೂ ರಾಷ್ಟ್ರದ ಸ್ಥಾಪನೆಯ ಕಾರ್ಯಕ್ಕಾಗಿ ಕಾರ್ಯನಿರತರಾಗಿದ್ದಾರೆ. ಈ ಗ್ರಂಥದಿಂದ ಸಾಧಕರಲ್ಲಿ ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರ ಬಗೆಗಿನ ಶ್ರದ್ಧೆ ಮತ್ತು ಭಾವ ಇನ್ನೂ ಹೆಚ್ಚಾಗುವುದು. ಇದರಿಂದ ಬರುವ ಭೀಕರ ಆಪತ್ಕಾಲದಲ್ಲಿ ಎಷ್ಟೇ ಮಹಾಭಯಂಕರ ಸಂಕಟಗಳು ಎರಗಿದರೂ, ಸಾಧಕರ ಅಂತಃಕರಣದಲ್ಲಿ ‘ಅರೆ, ಏಕೆ ಹೆದರುವೆ ? ಪ.ಪೂ. ಡಾಕ್ಟರರಿದ್ದಾರಲ್ಲ !’ ಎಂಬ ಶಬ್ದಗಳು ಪುನಃ ಪುನಃ ಮೂಡುವವು. ಅದಕ್ಕಾಗಿಯೇ ಈ ಗ್ರಂಥದಲ್ಲಿ ನಾವು ಇವೆಲ್ಲ ಆಶೀರ್ವಾದ ಮತ್ತು ಗೌರವೋದ್ಗಾರಗಳನ್ನು ಸೇರಿಸಿದ್ದೇವೆ. ‘ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ವ್ಯಕ್ತಿತ್ವವನ್ನು ಬಿಂಬಿಸಲು ಅಥವಾ ವ್ಯವಹಾರಿಕ ಉದ್ದೇಶವನ್ನಿಟ್ಟುಕೊಂಡು ಅವರ ಮಹಿಮೆಯನ್ನು ಹೆಚ್ಚಿಸಲು ಮಾಡಿದ ಪ್ರಯತ್ನ’ ಎಂಬ ಹೀನ ಭಾವನೆಯಿಂದ ಯಾರೂ ನೋಡಬಾರದು.

ಗುರುಗಳ ಆಶೀರ್ವಾದವೇ ಶಿಷ್ಯನ ಸಾಮರ್ಥ್ಯ ಮತ್ತು ಖ್ಯಾತಿಯನ್ನು ಹೆಚ್ಚಿಸುತ್ತವೆ. ಗುರುಗಳ ಆಶೀರ್ವಾದದಿಂದಲೇ ಇಂದಿಗೂ ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರು ಅಖಿಲ ಮನುಕುಲದ ಉದ್ಧಾರಕ್ಕಾಗಿ ಧರ್ಮಸಂಸ್ಥಾಪನೆಯ, ಅಂದರೆ ಹಿಂದೂ ರಾಷ್ಟ್ರದ ಸ್ಥಾಪನೆಯ ದಿವ್ಯ ಕಾರ್ಯವನ್ನು ಮಾಡುತ್ತಿದ್ದಾರೆ. ಇಷ್ಟೇ ಅಲ್ಲದೇ ಈ ಕಾರ್ಯವನ್ನು ಮಾಡುವ ಸಾವಿರಾರು ಸಾಧಕರನ್ನೂ ಅವರು ತಯಾರಿಸುತ್ತಿದ್ದಾರೆ ! ಇದು ಅವರ ಅದ್ವಿತೀಯ ವೈಶಿಷ್ಟ್ಯವಾಗಿದೆ. ಶಿಷ್ಯನಿಗೆ ಗುರುಗಳ

ಆಶೀರ್ವಾದ ದೊರೆಯಲು ಶಿಷ್ಯನ ಸಾಧನೆಯೂ ಅಷ್ಟೇ ಸರಿಸಮನಾಗಿರಬೇಕು. ಶಿಷ್ಯನಲ್ಲಿ ಗುರುಗಳ ಬಗ್ಗೆ ಸಂಪೂರ್ಣ ಸಮರ್ಪಣಾಭಾವ, ಗುರುಕಾರ್ಯದ ಬಗ್ಗೆ ಪರಾಕಾಷ್ಠೆಯ ತಳಮಳ, ಸಮಷ್ಟಿ ಉದ್ಧಾರದ ವ್ಯಾಪಕ ವಿಚಾರ ಇತ್ಯಾದಿ ಗುಣಗಳ ಸಮುಚ್ಚಯವಿರಬೇಕಾಗುತ್ತದೆ. ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರಲ್ಲಿ ಈ ಗುಣಗಳಿರುವುದರಿಂದ ಅವರಿಗೆ ಗುರುಗಳ ಆಶೀರ್ವಾದ ದೊರಕಿತು ಮತ್ತು ಅದು ಫಲಪ್ರದವೂ ಆಯಿತು ! ಇದರಿಂದ ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರ ಸಾಧನೆಯು ಎಷ್ಟು ಉಚ್ಚ ಮಟ್ಟದ್ದಾಗಿದೆ ಎಂಬುದೂ ಗಮನಕ್ಕೆ ಬರುತ್ತದೆ. ಅವರು ಮಾಡಿದ ವ್ಯಷ್ಟಿ ಮತ್ತು ಸಮಷ್ಟಿ ಸಾಧನೆಯ ಸಂಕ್ಷಿಪ್ತ ಸಾರಾಂಶವನ್ನೂ ಈ ಗ್ರಂಥದಲ್ಲಿ ನೀಡಲಾಗಿದೆ.

ಇಂದಿನವರೆಗೆ ಅನೇಕ ಸಂತ–ಮಹಾತ್ಮರು ಆಗಿ ಹೋದರು. ಸಾಧಕಾವಸ್ಥೆಯಿಂದ ಬ್ರಹ್ಮಪದದ ಪ್ರಾಪ್ತಿಯವರೆಗಿನ ಅವರ ಸಾಧನಾಪ್ರವಾಸದಲ್ಲಿ ಅವರ ಆಂತರಿಕ ಅವಸ್ಥೆಗಳಲ್ಲಾದ ಪರಿವರ್ತನೆ, ಅವರ ಆಧ್ಯಾತ್ಮಿಕ ಉನ್ನತಿಯ ಮೌಲ್ಯಮಾಪನ ಇತ್ಯಾದಿಗಳು ಇತರರಿಗೆ ತಿಳಿಯಲಿಲ್ಲ. ಸಂತರು ಅಹಂರಹಿತರಾಗಿರುವುದರಿಂದ ತಾವಾಗಿಯೇ ಇವೆಲ್ಲವನ್ನೂ ಹೇಳುವುದೂ ಇಲ್ಲ. ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರು ಮಾತ್ರ ಸಾಧಕರಿಗೆ ಇವೆಲ್ಲವೂ ಕಲಿಯಲು ಸಿಗಬೇಕೆಂದು 'ತಮ್ಮ ಉನ್ನತಿಯ ಮೌಲ್ಯಮಾಪನ ಮಾಡಲು ಬರುವಂತಹ' ಅಂಶಗಳನ್ನು ಅವರು ಸಾಧಕಾವಸ್ಥೆಯಿಂದಲೇ ಬರೆದಿಟ್ಟಿದ್ದರು, ಹಾಗೆಯೇ ಇದರ ಬಗ್ಗೆ ಅವರು ಮುಂದೆ ಸನಾತನದ ಜ್ಞಾನ ಪಡೆಯುವ ಸಾಧಕರಿಂದಲೂ ಅರಿತುಕೊಂಡರು. ಇವೆಲ್ಲ ಅಮೂಲ್ಯ ಮಾಹಿತಿಗಳೂ ಈ ಗ್ರಂಥದಲ್ಲಿವೆ. ಇದು ಈ ಗ್ರಂಥದ ವಿಭಿನ್ನತೆಯಾಗಿದೆ.

೧೯೯೦ ರಿಂದ ಗುರುಗಳು ವಿವಿಧ ರೀತಿಯಲ್ಲಿ ಸಚ್ಚಿದಾನಂದ ಪರಬ್ರಹ್ಮ ಡಾ. ಆಠವಲೆಯವರ ಆಧ್ಯಾತ್ಮಿಕ ಅಧಿಕಾರವನ್ನು ಎಲ್ಲರ ಗಮನಕ್ಕೆ ತಂದು ಕೊಡುತ್ತಿದ್ದರೂ ಇಂದಿನವರೆಗೆ ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರು ತಮ್ಮನ್ನು ಗುರುಗಳ ಶಿಷ್ಯರೆಂದೇ ತಿಳಿಯುತ್ತಾರೆ ಮತ್ತು ಶಿಷ್ಯಭಾವದಿಂದಲೇ ಸನಾತನದ ಆಶ್ರಮದಲ್ಲಿರುತ್ತಾರೆ ! ಇದೂ ಸಹ ಅವರ ಒಂದು ವೈಶಿಷ್ಟ್ಯವೇ ಆಗಿದೆ. ಇಂತಹ ಅತ್ಯುಚ್ಚ ಮಟ್ಟದ ಸಂತರ ಮಾರ್ಗದರ್ಶನಕ್ಕನುಸಾರ ಸಾಧನೆಯನ್ನು ಮಾಡುವ ಭಾಗ್ಯ ದೊರಕಲು ಜನ್ಮಜನ್ಮಾಂತರಗಳ ಪುಣ್ಯವಿರಬೇಕಾಗುತ್ತದೆ. ನಮಗೆಲ್ಲರಿಗೂ ಈ ಭಾಗ್ಯ ದೊರಕಿದೆ. ಸಚ್ಚಿದಾನಂದ ಪರಬ್ರಹ್ಮ ಡಾಕ್ಟರರ ಜನ್ಮ ಕೇವಲ ಸಾಧಕರ ಉದ್ಧಾರಕ್ಕಾಗಿಯೇ ಆಗಿರುವಂತಿದೆ. ಅವರಂತಹ ಗುರುಗಳ ಇಂದು ಇಡೀ ಪೃಥ್ವಿಯಲ್ಲಿ ಹುಡುಕಿದರೂ ಸಿಗುವುದಿಲ್ಲ. ಇಂದಿನವರೆಗೆ ಸಾಧಕರ ಮೇಲೆ ಬಂದಿರುವ ಎಲ್ಲ ಸಂಕಟಗಳ ಸಮಯದಲ್ಲಿ ಅವರೇ ಸಾಧಕರ ಸರ್ವತೋಮುಖ ಕಾಳಜಿ ವಹಿಸಿದ್ದಾರೆ. ಸಾಧಕರು


'ಗುರುಗಳೇ ಭಗವಂತ. ಗುರುಗಳಿಗಾಗಿಯೇ ನನ್ನ ಜನ್ಮವಾಗಿದೆ' ಎಂಬ ಭಾವವನ್ನಿಟ್ಟು ಅವರ ಮಾರ್ಗದರ್ಶನದಲ್ಲಿ ಸಾಧನೆ ಮಾಡಿದರೆ ಘೋರ ಆಪತ್ಕಾಲದಲ್ಲಿ ಅವರ ರಕ್ಷಣೆಯಂತೂ ಆಗಲಿದೆ, ಹಾಗೆಯೇ ಸಾಧಕರು ಮೋಕ್ಷಕ್ಕೂ ಹೋಗುವರು. ಈ ಗ್ರಂಥದ ಮಾಧ್ಯಮದಿಂದ 'ಎಲ್ಲರಿಗೂ ಹೀಗೆ ತಳಮಳದಿಂದ ಸಾಧನೆ ಮಾಡುವ ಬುದ್ಧಿ ಮತ್ತು ಪ್ರೇರಣೆ ಸಿಗಲಿ' ಎಂದು ಶ್ರೀ ಗುರುಚರಣಗಳಲ್ಲಿ ಪ್ರಾರ್ಥನೆ !'

**– (ಪೂ.) ಸಂದೀಪ ಆಳಶಿ (೧೨.೧೧.೨೦೨೨)**

(ಗ್ರಂಥಮಾಲಿಕೆ 'ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಚರಿತ್ರೆ' ಮತ್ತು ಉಪಮಾಲಿಕೆ 'ಸಚ್ಚಿದಾನಂದ ಪರಬ್ರಹ್ಮ ಡಾ. ಜಯಂತ ಆಠವಲೆಯವರ ಸಾಧನಾಪ್ರವಾಸ' ಇವುಗಳ ಹೆಚ್ಚಿನ ಪರಿಚಯವನ್ನು 'ಸಾಧನಾಪ್ರವಾಸ : ಖಂಡ ೧'ರಲ್ಲಿ ನೀಡಲಾಗಿದೆ.)

**'ಡಾ. ಆಠವಲೆಯವರ ಸಾಧನಾಪ್ರವಾಸ' ಈ ಗ್ರಂಥಮಾಲಿಕೆಯ ಮೊದಲ ಖಂಡ !**

## ಸಚ್ಚಿದಾನಂದ ಪರಬ್ರಹ್ಮ
## ಡಾ. ಆಠವಲೆ ಇವರು ಗುರುಗಳಿಂದ ಕಲಿಯುವುದು



卐 ಡಾ. ಜಯಂತ ಆಠವಲೆಯವರು ಸಾಧನೆಯ ಕಡೆಗೆ ಹೊರಳುವ ಕಾರಣಗಳು

卐 ಗುರುಪ್ರಾಪ್ತಿಯ ಮೊದಲು ಮಾಡಿದ ಅಧ್ಯಾತ್ಮಪ್ರಸಾರ

卐 ಗುರುಗಳಾದ ಪ.ಪೂ. ಬಾಬಾರವರು ಡಾ. ಆಠವಲೆಯವರಿಗೆ ನಾಮಸಾಧನೆ, ಅಹಂ ನಿರ್ಮೂಲನೆ, ಸಾಕ್ಷಿಭಾವ, ಅದ್ವೈತದೆಡೆಗೆ ಹೋಗುವುದು ಮುಂತಾದವುಗಳ ಬಗ್ಗೆ ಕಲಿಸುವುದು

卐 ಡಾ. ಆಠವಲೆಯವರು ಕಡಿಮೆ ಕಾಲಾವಧಿಯಲ್ಲಿ ಗುರುಚರಣಗಳಲ್ಲಿ ಸರ್ವಸ್ವವನ್ನು ಅರ್ಪಿಸುವುದು